# ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ : 85 / 2015

ಪಿರ್ಯಾದುದಾರರು : ಕುದೂರು ಪೋಲಿಸ್‌ಠಾಣೆ

**ವಿರುದ್ಧ**

**ಆರೋಪಿಗಳು : ಸಿದ್ದೇಗೌಡ ಬೀರಾದಾರ್**

**ಚಾಸಾ :- 18 / ಪ್ರಾಸಾ :- 09**

| | |
|---|---|
| ಹೆಸರು | **ದಿವ್ಯಶ್ರೀ** |
| ತಂದೆಯ / ಗಂಡನ ಹೆಸರು | **ಯೋಗೇಶ** |
| ವಯಸ್ಸು | **32** |
| ಉದ್ಯೋಗ | **ಗಾರ್ಮೆಂಟ್ಸ್** |
| ವಿಳಾಸ | **ಕಾಮಾಕ್ಷಿಪಾಳ್ಯ** |

**ದಿನಾಂಕ: 26-04-2022 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ನಾನು ಆರೋಪಿಯನ್ನು ನೋಡಿರುತ್ತೇನೆ, ಸದರಿಯವರು ಕೆ.ಎಸ್.ಆರ್.ಟಿ.ಸಿ. ಚಾಲಕನಾಗಿರುತ್ತಾರೆ. ಚಾಸಾ-1 ರಿಂದ ಚಾಸಾ-14 ಮತ್ತು ಚಾಸಾ-16 ಪರಿಚಯವಿಲ್ಲ, ಚಾಸಾ-15 ನನ್ನ ಮಗಳು, ಚಾಸಾ-17 ನನ್ನ ಗಂಡನಾಗಿರುತ್ತಾರೆ. ದಿನಾಂಕ: 21-04-2014 ರಂದು ವಿಠಲಪುರದಿಂದ ಹಬ್ಬ ಮುಗಿಸಿ ವಾಪಸ್ಸು ಆಗುತ್ತಿದ್ದು, ಮಧ್ಯಾಹ್ನ 1.30 ರಿಂದ 2 ಗಂಟೆಯ ಸಮಯದಲ್ಲಿ ಯಡಿಯೂರಿನಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ಸಂಖ್ಯೆ ಕೆಎ-13-ಎಫ್-1882 ರಲ್ಲಿ ಪ್ರಯಾಣ ಮಾಡುತ್ತಿದ್ದು, ಸೋಲೂರಿನ ಹಾಲಿನ ಡೈರಿಯ ಬಳಿಯಲ್ಲಿ ಚಾಲಕ



ಅತಿವೇಗ ಮತ್ತು ನಿರ್ಲಕ್ಷ್ಯತೆಯಿಂದ ಚಾಲನೆಯಿಂದ ಸದರಿ ಬಸ್ ರಸ್ತೆಯ ಪಕ್ಕದಲ್ಲಿ ಬಿದ್ದಿದ್ದು, ಅದರಿಂದ ಚಾಸಾ-15 ರವರ ಎಡಗೈ ಹೆಬ್ಬೆರಳು ಕತ್ತರಿಸಿದ್ದು, ಕೈನ ಚರ್ಮವು ಕಿತ್ತು ಬಂದಿರುತ್ತದೆ ಹಾಗೂ ಕಿರು ಬೆರಳು ಕೂಡ ಕತ್ತರಿಸಲ್ಪಟ್ಟಿದ್ದೆ, ಮೂರು ಬಾರಿ ಸದರಿ ಚಾಸಾ-15 ರವರಿಗೆ ಚರ್ಮವನ್ನು ತೆಗೆದು ಹಾಕುವ

ಶಸ್ತ್ರ ಚಿಕಿತ್ಸೆ ಆಗಿದ್ದು, ಮತ್ತೊಮ್ಮೆ ಹೊಲಿಗೆ ಹಾಕಲಾಗಿದೆ. ತೊಡೆಯ ಚರ್ಮವನ್ನು ತೆಗೆದು ಹೊಟ್ಟೆಗೆ ಹಾಕಿ ಚಿಕಿತ್ಸೆ ಮಾಡಲಾಗಿದೆ. ನನಗೆ ಮತ್ತು ನನ್ನ ಗಂಡ ಚಾಸಾ-17 ರವರಿಗೆ ಮೂಗೇಟು ಆಗಿರುತ್ತದೆ. ನಾನು ಮತ್ತು ನನ್ನ ಗಂಡ ಕ್ಲಿನಿಕ್ ನಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇವೆ. ಸದರಿ ಅಪಘಾತ ಪಡಿಸಿದ ಚಾಲಕನನ್ನು ನಾನು ನೋಡಿದರೆ ಗುರುತಿಸುತ್ತೇನೆ, ಈಗ ನ್ಯಾಯಾಲಯದ ಮುಂದಿರುವ ಆರೋಪಿಯು ಸದರಿ ನಾನು ಹೇಳಿದ ವಾಹನದ ಚಾಲಕರಾಗಿದ್ದರು.

**ಪಾಟೀ ಸವಾಲು ಃ- ಶ್ರೀ. ಜಿ.ಎನ್.ಎಸ್.** ವಕೀಲರಿಂದ **ಆರೋಪಿ** ಪರವಾಗಿ ಃ-

ಹಬ್ಬವು 17 ರಿಂದ 19 ನೇ ದಿನಾಂಕದಂದು ಆಗಿರುತ್ತದೆ. 21 ನೇ ತಾರೀಖಿನಂದು ಹಬ್ಬವಿರಲಿಲ್ಲ ಎಂದರೆ ಸರಿ. ನಾವು ಯಡಿಯೂರಿನಿಂದ ಬೆಂಗಳೂರಿಗೆ ಬರುತ್ತಿದ್ದೇವು, ಸಾಕ್ಷಿ ಮುಂದುವರೆದು ವಿಠಲಪುರದಿಂದ ಯಡಿಯೂರಿಗೆ ಆಟೋದಲ್ಲಿ ಬಂದಿದ್ದೇವು ಎನ್ನುತ್ತಾರೆ. ಯಡಿಯೂರಿನಿಂದ ಸೋಲೂರಿನ ವರೆಗೂ ಬಸ್ ಅತಿವೇಗದಲ್ಲಿಯೇ ಬರುತ್ತಿತ್ತು. ಕೆ.ಎಸ್.ಆರ್.ಟಿ.ಸಿ. ಬಸ್ ನವರಿಗೆ ವೇಗ ನಿಯಂತ್ರಣ ಸೂಚನೆಯಿದ್ದು, ಅವರು ಅತಿವೇಗವಾಗಿ ಬರುವುದಿಲ್ಲ ಎಂದರೆ ಸರಿಯಲ್ಲ. ಬಸ್ಸಿನ ಸಂಖ್ಯೆ ನಿಖರವಾಗಿ ಗೊತ್ತಿದೆ. ಬಸ್ಸಿನ ಟಿಕೆಟ್ ನಲ್ಲಿ ನಂಬರ್ ಇದ್ದು, ಸದರಿ ಟಿಕೆಟ್ ಪೋಲಿಸರಿಗೆ ನೀಡಿರುತ್ತೇನೆ. ನಾನು ಸದರಿ ಟಿಕೆಟ್ ನೀಡಿಲ್ಲದಿದ್ದರೂ ಮತ್ತು ಟಿಕೆಟ್ ನೀಡಿರುವ ವಿಚಾರವನ್ನು



ಹೇಳಿಕೆಯಲ್ಲಿ ಹೇಳಿಲ್ಲದಿದ್ದರೂ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಅಪಘಾತದ ಸ್ಥಳವು ಜನ ನಿಬಿಡ ಪ್ರದೇಶ ಎಂದರೆ ಸರಿ. ಸದರಿ ಸ್ಥಳದಲ್ಲಿ ಯಾವುದೇ ವಾಹನವು ಅತಿವೇಗವಾಗಿ ಚಾಲನೆ ಮಾಡುವುದಿಲ್ಲ ಎಂದರೆ ಸರಿಯಲ್ಲ. ಅಪಘಾತ ಪರಿಹಾರ ವಿಮೆ ಪಡೆದಿರುತ್ತೇವೆ. ಅಪಘಾತದ ಪರಿಹಾರ ಹಣ ಪಡೆಯಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

2. ಆರೋಪಿಯು ಅತಿವೇಗ ಮತ್ತು ನಿರ್ಲಕ್ಷತೆ ಚಾಲನೆ ಮಾಡಿದ್ದರಿಂದ ಅಪಘಾತ ಆಗಿರುತ್ತದೆ, ಸಾಕ್ಷಿ ಮುಂದುವರೆದು ರಸ್ತೆಯಲ್ಲಿ ಏನು ಇದೆ ಇಲ್ಲವೆಂದು ಗಮನಿಸಿರುವುದಿಲ್ಲ ಎನ್ನುತ್ತಾರೆ. ಅಪಘಾತವು ಬಸ್ಸಿನ ತಾಂತ್ರಿಕ ದೋಷದಿಂದ ಆಗಿದ್ದು, ಆರೋಪಿಯ ಅತಿವೇಗ ಮತ್ತು ನಿರ್ಲಕ್ಷತೆಯ ಚಾಲನೆಯಿಂದ ಅಲ್ಲ ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ನಾನು ಪೋಲಿಸರಿಗೆ ಹೇಳಿರುತ್ತೇನೆ. ಸದರಿ ವಿಚಾರವನ್ನು ನನ್ನ ಗಂಡ ಹೇಳಿರುತ್ತಾರೆ, ನಾನು ಆಸ್ಪತ್ರೆಯ ಒಳಗೆ ಇದ್ದೆ ಎನ್ನುತ್ತಾರೆ.

**ಮರು ವಿಚಾರಣೆ ಃ- ಇರುವುದಿಲ್ಲ.**

ಓ. ಹೇ. ಕೇ. ಸ. ಇ. ಎ.  ಓಪ್ಪಿರುತ್ತಾರೆ,

ಅ. ನ್ಯಾ. ದಂ. ಮತ್ತು ಜೆ. ಎಂ. ಎಫ್? ಸಿ. ಮಾಗಡಿ.